ಪ್ರಧಾನ ಸಿ.ಜೆ. ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಮದ್ದೂರು
ದಿಃ30-10-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಸ್ ವಕೀಲರವರಿಂದಃ

ಕಲ್ಲು ಕಂಬ ಹಾಕಿ ತೊಂದರೆ ಕೊಟ್ಟಿದ್ದನ್ನು ನಾನು ತಡೆದಿರುತ್ತೇನೆ. ಕಲ್ಲುಕಂಬವನ್ನು ಪ್ರತಿವಾದಿಯವರ ಜಮೀನಿನ ಪಶ್ಚಿಮಕ್ಕೆ ನೆಡಲಾಗಿತ್ತು. ಪಶ್ಚಿಮಕ್ಕೆ ಪ್ರತಿವಾದಿಯವರ ಜಮೀನಿನ ನಂತರ ವೆಂಕಟೇಶ್ ಎಂಬುವವರ ಜಮೀನು. ಸಾಕ್ಷಿ ಮುಂದುವರೆದು ಪೂರ್ವಕ್ಕೆ ವೆಂಕಟೇಶ್ ರವರ ಜಮೀನು, ಪಶ್ಚಿಮಕ್ಕೆ ರಸ್ತೆ ಎನ್ನುತ್ತಾರೆ. ಕಲ್ಲುಕಂಬದ ಪೂರ್ವಕ್ಕೆ ನೀಲಯ್ಯನವರ ಜಮೀನು. ನೀಲಯ್ಯರವರ ಜಮೀನಿನ ಪಶ್ಚಿಮಕ್ಕೆ 30-40 ವರ್ಷದ ಬೇಲಿಯಿದ್ದು, ನಂತರ ರಸ್ತೆ ಬರುತ್ತದೆ ಎಂದರೆ ಸರಿ. ಪಶ್ಚಿಮದಲ್ಲಿ ನೀಲಯ್ಯರವರ ಜಮೀನಿಂದ ಪೂರ್ವಕ್ಕೆ ನಮ್ಮ ಜಮೀನಿನ ವರೆಗೆ ಸದರಿ ಬೇಲಿಯಿದೆ ಎಂದರೆ ಸರಿ. ಸದರಿ ಬೇಲಿ ವೆಂಕಟೇಶ್ ರವರ ಜಮೀನಿಂದ ನಮ್ಮ ಜಮೀನಿನ ವರೆಗೆ ಉತ್ತರದಿಂದ ದಕ್ಷಿಣಕ್ಕೆ ಇದೆ ಎಂದರೆ ಸಾಕ್ಷಿಯು ಸದರಿಯು 40 ವರ್ಷದಿಂದ ಇರದೇ ಈಗ 5-6 ವರ್ಷದಿಂದ ಇದೆ ಎನ್ನುತ್ತಾರೆ. ದಕ್ಷಿಣ ದಿಕ್ಕಿನಲ್ಲಿ ಪ್ರತಿವಾದಿ-2 ರವರ ಜಮೀನಿಂದ ಪ್ರತಿವಾದಿ-1 ರವರ ಜಮೀನಿನವರೆಗೆ ಬೇಲಿ ಇದೆ ಎಂದರೆ ಸರಿ. ಸದರಿ ಬೇಲಿಯು ಹಳೆಯ ಬೇಲಿಯಾಗಿದೆ ಎಂದರೆ ಸಾಕ್ಷಿಯು ನಮ್ಮ ಜಮೀನನ್ನು ಸೇರಿಸಿ ಹಳೆಯ ಬೇಲಿಯಿದೆ ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ಬೇಲಿಯಿತ್ತು ಎಂದು ತೋರಿಸಲು ಫೋಟೋ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಬೇಲಿ ಕಿತ್ತು ಹಾಕಲಾಗಿದೆ ಎನ್ನುತ್ತಾರೆ. ನಮ್ಮ ಜಮೀನಿಗೆ ಎಂದು ಕೂಡಾ ಬೇಲಿ ಹಾಕಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇಲಿ ಕಿತ್ತು ವಿಚಾರಕ್ಕೆ ಗಲಾಟೆಯಾಗಿದೆ ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ಬೇಲಿಯಿತ್ತು ಎಂದು ಸಾಕ್ಷಿದಾರರ ವಿಚಾರಣೆ ಮಾಡಲು ತೊಂದರೆ ಇಲ್ಲ. ನಮ್ಮ ಜಮೀನು 33 ಗುಂಟೆ ಇದೆ. ಪ್ರತಿವಾದಿ-1 ಮತ್ತು 2 ರವರ ಜಮೀನು ತಲಾ 30 ಗುಂಟೆ , ಪ್ರತಿವಾದಿ-3 ರಿಂದ 5 ರವರ ಒಟ್ಟು ಜಮೀನು 32 ಗುಂಟೆ ಇದೆ. ಪ್ರತಿವಾದಿ-1 ರಿಂದ 5 ಜಮೀನು ಉತ್ತರ ದಕ್ಷಿಣ ಸಮನಾಗಿದ್ದು, ನಮ್ಮ ಜಮೀನು ಸ್ವಲ್ಪ ಉದ್ದವಿದೆ ಎಂದರೆ ಸರಿ. ನಮ್ಮ ಜಮೀನಿನ ಉದ್ದದ ವ್ಯತ್ಯಾಸದ ಜಮೀನಿನಲ್ಲಿ ನೇರವಾಗಿ ಹಳ್ಳವಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆಯವರ ಜಮೀನು ಇದೆ ಎನ್ನುತ್ತಾರೆ. ಸದರಿ ಹಳ್ಳವಾದ ನಂತರ ಬೇರೆಯವರ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ಹಳ್ಳ ಇಲ್ಲ. ನಮ್ಮ ಜಮೀನಿನಲ್ಲಿ ಬಂಡೆಕಲ್ಲು ಇದ್ದರಿಂದ ಹಳ್ಳವಾಗಿದೆ ಎನ್ನುತ್ತಾರೆ. ನಮ್ಮ ಜಮೀನಿನಲ್ಲಿ ಬಂಡೆಕಲ್ಲು ಇದೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸುತ್ತೇನೆ. ಪ್ರತಿವಾದಿಗಳಿಗೆ ತೊಂದರೆ

ಕೊಡಬೇಕೆಂದು ಸದರಿ ವಾದಿಗಳ ಸ್ವತ್ತಿನಲ್ಲಿ ರಸ್ತೆ ಇಲ್ಲದಿದ್ದರೂ ರಸ್ತೆ ಇದೆ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ 1998 ರಲ್ಲಿ ವಿಭಾಗವಾಗಿರುತ್ತಾರೆ. ನನ್ನ ತಂದೆಯು ನ್ಯಾಯಾಲಯಕ್ಕೆ ಬರಲು ಸಾಧ್ಯವಿಲ್ಲವೆಂದು ಅವರಿಂದ ಜಿ ಪಿ ಎ ಪಡೆದು ನಾನು ವಿಚಾರಣೆ ನೀಡುತ್ತಿದ್ದೇನೆಂದರೆ ಸರಿ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದಲ್ಲಿ ಸತ್ಯ ಹೊರಬರುತ್ತದೆ ಸದರಿಯವರಿಂದ ಜಿ ಪಿ ಎ ಪಡೆದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಸ್ವತ್ತಿನಲ್ಲಿ ಪ್ರಸ್ತುತ ಹುರುಳಿ, ತೆಂಗು ಬೆಳೆದಿದ್ದೇವೆ. ಸದರಿ 2 ವರ್ಷದಾಗಿದೆ. ನಮ್ಮ ಜಮೀನು ಖುಷ್ಕಿ ಜಮೀನಾಗಿದ್ದು ನೀರಾವರಿ ಸೌಲಭ್ಯವಿಲ್ಲ ಎಂದರೆ ಸರಿ. ತೆಂಗು ಬೆಳೆಯಲು ನೀರಿನ ಸೌಲಭ್ಯ ಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ಮಳೆಗಾಲದಲ್ಲೂ ತೆಂಗು ಬೆಳೆಯಬಹುದು ಎನ್ನುತ್ತಾರೆ. ಪ್ರತಿವಾದಿ-1 ರವರು ಕಲ್ಲು ಕಂಬ ನೆಡುತ್ತಿದ್ದರು ಎಂದು ತೋರಿಸಲು ದಾಖಲಾತಿ ಇಲ್ಲ. ಪ್ರತಿವಾದಿಯವರು ತಂದು ಇಟ್ಟಿದ್ದ ಕಲ್ಲುಕಂಬವನ್ನು ನಾನು ಹೊಡೆದು ಹಾಕಿದ್ದೇನೆಂದರೆ ಸರಿಯಲ್ಲ. ಮುಂದುವರೆದು ಸಾಕ್ಷಿಯು ಕಲ್ಲನ್ನು Load and Unload ಮಾಡುವಾಗ ಹೊಡೆದು ಹಾಕಿರುತ್ತಾರೆ ಎಂದು ಹೇಳಿದ್ದು ಸದರಿಯು ಅವಶ್ಯಕತೆ ಇಲ್ಲ ಎಂದು ತಿರಸ್ಕರಿಸಲಾಗಿದೆ. ಪಶ್ಚಿಮದಿಂದ ಪೂರ್ವಕ್ಕೆ ಬೇಲಿಯ ನಂತರ ರಸ್ತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರ ಜಮೀನಿನವರು ತಿರುಗಾಡಲು ಬಿಟ್ಟುಕೊಂಡಿದ್ದಾರೆ ಎನ್ನುತ್ತಾರೆ. ಪಶ್ಚಿಮದಿಂದ ಪೂರ್ವಕ್ಕೆ ಪ್ರತಿವಾದಿ-1 ರಿಂದ 5 ರವರ ಬೇಲಿಯಿದ್ದು, ಅದರ ಉತ್ತರಕ್ಕೆ ಹಳ್ಳಯಿದ್ದು, ಸದರಿ ಹಳ್ಳವೂ ಪ್ರತಿವಾದಿಗಳಿಗೆ ಸೇರಿದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಹಿಸ್ಸಾ ಟಿಪ್ಪಣಿ ನೋಡಿಲ್ಲ.

ಮುಂದುವರೆದ ಪಾಟೀಸವಾಲಿಗಾಗಿ ಸಮಯಾವಕಾಶ ಕೋರಿದ್ದು ಈಗಾಗಲೇ ದಿಃ15-06-2024 ರಿಂದ ಪಾಟೀಸವಾಲಿಗೆ ಮುಂದೂಡಿದ್ದು ಈಗಾಗಲೇ ಎರಡು ಭಾರಿ ಭಾಗಾಶಃ ಪಾಟೀಸವಾಲು ಮಾಡಿದ್ದು ಅಂತಿಮ ಅವಕಾಶ ಎಂದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)

ಪ್ರಧಾನ  ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು